## ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸಾಗರ.

ಸಿ.ಸಿ. ನಂ. 784/2022

ಪಿರ್ಯಾದುದಾರರುಃ ರಾಮಚಂದ್ರಪ್ಪ ಬಿನ್ ಕುಂಬತ್ತಿ ಬಸಪ್ಪ,
ವಯಸ್ಸು ಸುಮಾರು 71 ವರ್ಷ,
ವ್ಯವಸಾಯ ಕೆಲಸ,
ಬಸವನಬ್ಯಾಣ ವಾಸ, ಬರೂರು ಗ್ರಾಮ,
ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ವಿರುದ್ಧ

ಆರೋಪಿಃ ಪರಶುರಾಮ ಬಿನ್ ಚೌಡಪ್ಪ,
ವಯಸ್ಸು ಸುಮಾರು 45 ವರ್ಷ,
ಕಾರ್ಯನಿವರ್ಹಣಾಧಿಕಾರಿ,
ವ್ಯವಸಾಯ ಸೇವಾ ಸಹಕಾರ ಸಂಘ ನಿ., ಬರೂರು,
ಬರೂರು ಗ್ರಾಮ ಮತ್ತು ಅಂಚೆ,
ಸಾಗರ ನಗರ, ಶಿವಮೊಗ್ಗ ಜಿಲ್ಲೆ.

## ಆಪಾದನೆ

ಪಿರ್ಯಾದುದಾರರು ಮತ್ತು ಆರೋಪಿಯಾದ ನೀವು ಬಹಳ ವರ್ಷಗಳಿಂದ ಪರಿಚಯಸ್ಥರಾಗಿದ್ದು, ದಿಃ 05.03.2022 ರಂದು ನೀವು ನಿಮ್ಮ ಗೃಹಕೃತ್ಯದ ಅಡಚಣೆಗಾಗಿ ಅವರಿಂದ ರೂ.2,10,000/- ಗಳನ್ನು ನಗದಾಗಿ ಕೈಗಡ ಸಾಲವನ್ನು ಪಡೆದು, ಅದನ್ನು ಮೂರು ತಿಂಗಳ ಒಳಗಾಗಿ ವಾಪಸ್ಸು ಕೊಡುವುದಾಗಿ ಮಾತು ಕೊಟ್ಟು, ಆದರೆ ನೀವು ಸಕಾಲದಲ್ಲಿ ಹಣವನ್ನು ಹಿಂತಿರುಗಿಸದಿದ್ದರಿಂದ ಪಿರ್ಯಾದುದಾರರು ನಿಮ್ಮನ್ನು ಭೇಟಿಯಾಗಿ ಸಾಲದ ಹಣವನ್ನು ವಾಪಾಸ್ಸು ಕೊಡುವಂತೆ ನಿಮ್ಮನ್ನು ಪದೇ ಪದೇ ಕೇಳಿದಾಗ, ನೀವು ದಿಃ 04.07.2022 ರಂದು ನಿಮ್ಮ ಖಾತೆ ಹೊಂದಿರುವ ಶಿವಮೊಗ್ಗ ಡಿಸ್ಟ್ರಿಕ್ ಕೋ ಆಪರೇಟೀವ್ ಸೆಂಟ್ರಲ್ ಬ್ಯಾಂಕ್, ಸಾಗರ ಶಾಖೆಯ ಚೆಕ್ ನಂ. 129849 ನ್ನು ರೂ. 2,10,000/- ಗಳಿಗೆ ದಿಃ 04.07.2022 ನ್ನು ನಮೂದಿಸಿ, ಚೆಕ್ಕು ನೀಡಿ, ಸದರಿ ಚೆಕ್ಕನ್ನು ಅದೇ ದಿನ ಹಾಜರಿಸಿ ನಗಧೀಕರಿಸಿಕೊಳ್ಳುವಂತೆ ಹಾಗೂ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇರುವುದಾಗಿ ಹೇಳಿ ಕೊಟ್ಟಿದ್ದು, ಪಿರ್ಯಾದುದಾರರು ನಿಮ್ಮ ಮಾತನ್ನು ನಂಬಿ ಸದರಿ ಚೆಕ್ಕನ್ನು ನಗದು ಮಾಡಿಸಿಕೊಳ್ಳುವ ಸಲುವಾಗಿ ಅವರ ಖಾತೆ ಹೊಂದಿರುವ ಶಿವಮೊಗ್ಗ ಡಿಸ್ಟ್ರಿಕ್ ಕೋ ಆಪರೇಟೀವ್

ಸೆಂಟ್ರಲ್ ಬ್ಯಾಂಕ್, ಸಾಗರ ಶಾಖೆಯ ಮೂಲಕ ದಿಃ 04.07.2022 ರಂದು ನಗದೀಕರಿಸಲು ಹಾಜರುಪಡಿಸಿದಾಗ ಸದರಿ ಚೆಕ್ಕು ಫಂಡ್ಸ್ ಇನ್ ಸಫಿಶೀಯಂಟ್ ಎಂಬ ಷರಾದೊಂದಿಗೆ ಅಮಾನ್ಯವಾಗಿ ದಿಃ 04-07-2022 ರಂದು ಬ್ಯಾಂಕಿನ ಮೆಮೊದೊಂದಿಗೆ ಪಿರ್ಯಾದುದಾರರಿಗೆ ವಾಪಾಸ್ಸು ಬಂದಿದ್ದು,ನೀವು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲವೆಂದು ತಿಳಿದಿದ್ದಾಗ್ಯೂ ಸಹಾ ಪಿರ್ಯಾದಿಗೆ ಚೆಕ್ಕು ನೀಡಿ, ಮೋಸ ಮಾಡಬೇಕೆಂಬ ಉದ್ದೇಶದಿಂದ ಚೆಕ್ಕು ಅಮಾನ್ಯವಾಗುವಂತೆ ಮಾಡಿರುತ್ತೀರಿ, ಆದ್ದರಿಂದ ನೀವು ನೆಗೋಶಿಯಬಲ್ ಇನ್ಸ್ಟ್ರುಮೆಂಟ್ ಆಕ್ಟ್ ಕಲಂ 138 ರಡಿಯಲ್ಲಿ ನೀವು ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿದ್ದೀರಿ.

(ಶ್ರೀಮತಿ ಸ್ಪರ್ಶ ಎಂ. ಡಿಸೋಜ)

ದಿನಾಂಕಃ 06-02-2024

ಹೆಚ್ಚುವರಿ.ಸಿವಿಲ್ ಮತ್ತು ಪ್ರ. ದ. ನ್ಯಾ ದಂಡಾಧಿಕಾರಿಗಳು,
ಸಾಗರ.

# ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸಾಗರ.

**ಸಿ.ಸಿ. ನಂ. 784/2022**

ಪ್ರಶ್ನೆಃ 1. ನಿಮಗೆ ಈಗ ಓದಿ ಹೇಳಿದ ಆಪಾದನೆ ಕೇಳಿ ತಿಳಿಯಿತೇ?

ಉತ್ತರಃ

ಪ್ರಶ್ನೆಃ 2. ಈ ಮೇಲಿನ ಆಪಾದನೆಯನ್ನು ಒಪ್ಪಿಕೊಳ್ಳುತೀರೋ ಅಥವಾ ನಿಮ್ಮನ್ನು ನೀವು ಸಂರಕ್ಷಿಸಿಕೊಳ್ಳುತೀರೋ?

ಉತ್ತರಃ

(ಆರೋಪಿಗೆ ತಿಳಿದ ಕನ್ನಡ ಭಾಷೆಯಲ್ಲಿ ಈ ಆಪಾದನೆಯನ್ನು ಓದಿ ಹೇಳಿ ಅವರು ಹೇಳಿದಂತೆ ಯಥಾವತ್ತಾಗಿ ದಾಖಲಿಸಿಕೊಳ್ಳಲಾಗಿದೆ ಎಂದು ದೃಢೀಕರಿಸುತ್ತೇನೆ)

(ಶ್ರೀಮತಿ ಸ್ಪರ್ಶ ಎಂ. ಡಿಸೋಜ)
ದಿನಾಂಕಃ 06-02-2024 ಹೆಚ್ಚುವರಿ ಸಿವಿಲ್ ಮತ್ತು ಪ್ರ. ದ. ನ್ಯಾ ದಂಡಾಧಿಕಾರಿಗಳು,
ಸಾಗರ.

ಆರೋಪಿಯ ಸಹಿಃ